ವೃತ್ತಿ ಆರಂಭಿಸಿದವರು ಸುದರ್ಶನ್. ಅರ್ಚನಾ ಕೂಡ ಅದೇ ಕ್ಷೇತ್ರದಲ್ಲಿ ಕಲಿತವರು. ವೀಸಾ ಕಾರಣದಿಂದ ಅವರಿಗೆ ಕಲಿತ ವಿದ್ಯೆಯ ಕೆಲಸ ಮಾಡಲು ಅಲ್ಲಿ ಸಾಧ್ಯವಾಗಲಿಲ್ಲ. ಹಾಗೆಂದು ಸುಮ್ಮನೆ ಕೂರದಿರಲು ನಿರ್ಧರಿಸಿದರು. 2015ರಲ್ಲಿ ಆಹಾರಕ್ಕೆ ಸಂಬಂಧಿಸಿದ ಬ್ಲಾಗ್ ಶುರುಮಾಡಿದರು. ಟಿಫಿನ್ ಸರ್ವಿಸ್ ಕೊಡುತ್ತಾ ಒಂದಿಷ್ಟು ಜನರ ಜಿಹ್ವಾಚಾಪಲ್ಯ ತಣಿಸಲು ಯತ್ನಿಸಿದ್ದೂ ಆಗಲೇ. ಹೀಗೆ ಪ್ರಾರಂಭವಾದ ಆಹಾರಪ್ರೀತಿ ದಿನಗಳೆದಂತೆ ಗಂಭೀರವಾದ ಚಟುವಟಿಕೆಯಾಯಿತು. ಆಪ್ಯಾಯಮಾನವೂ ಆಯಿತೆನ್ನಿ. ಒಂದು ವರ್ಷ ಕಳೆಯುವಷ್ಟರಲ್ಲಿ ಟಿಫಿನ್ ಸರ್ವಿಸ್ ನಿಲ್ಲಿಸಿದರು. ಯೂಟ್ಯೂಬ್ ಚಾನೆಲ್, ಫೇಸ್‌ಬುಕ್ ಪುಟ, ಬ್ಲಾಗ್, ವೆಬ್‌ಸೈಟ್ ಹೀಗೆ ಆಹಾರಪ್ರೀತಿ ಹಂಚಿಕೊಳ್ಳಲು ಎಲ್ಲ ವೇದಿಕೆಗಳೂ ಮುಕ್ತವೆನಿಸಿದವು. ಆಮೇಲೆ ಆ್ಯಪ್ ಕೂಡ ಹೊಸ ಸಾಧ್ಯತೆಯನ್ನು ತೆರೆದಿಟ್ಟಿತು. ಇದುವರೆಗೆ ಅವರ ಆ್ಯಪ್ ಅನ್ನು 15 ಲಕ್ಷ ಜನ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಫೇಸ್‌ಬುಕ್ ಪುಟದ ಅನುಯಾಯಿಗಳ ಸಂಖ್ಯೆ 1.2 ಕೋಟಿ. ಯೂಟ್ಯೂಬ್ ಚಾನೆಲ್ ಚಂದಾದಾರರ ಸಂಖ್ಯೆ ಸುಮಾರು 60 ಲಕ್ಷ. 152 ಕೋಟಿಗೂ ಹೆಚ್ಚು ಜನ 2015ರಿಂದ ಇದುವರೆಗಿನ 1800ಕ್ಕೂ ಹೆಚ್ಚು ವಿಡಿಯೊಗಳನ್ನು ವೀಕ್ಷಿಸಿದ್ದಾರೆ.

ಸುದರ್ಶನ್ ತಮ್ಮ ಹಾಗೂ ಪತ್ನಿ ಅರ್ಚನಾ ಅವರ ಈ ಖಾದ್ಯ ವಾಹಿನಿಯ ಹೆಜ್ಜೆಜಾಡುಗಳನ್ನು ಬಹಳ ಹೆಮ್ಮೆಯಿಂದ ಬಿಚ್ಚಿಟ್ಟರು.

‘ಯೂಟ್ಯೂಬ್ ನಮ್ಮ ಆಹಾರ ಪ್ರೀತಿಯ ಸಾಮಾಜಿಕ ಜಾಲತಾಣದಲ್ಲಿ ಒಂದು ಸಣ್ಣ ಭಾಗವಷ್ಟೆ ಎನಿಸಿತ್ತು. ಇಲ್ಲಿ ಅಪ್‌ಡೇಟ್ ಆಗಲು ಸಾಕಷ್ಟು ವಿಷಯಗಳಿವೆ. ಆರು ವರ್ಷಗಳಿಂದ ನಾವು ಅವಿರತವಾಗಿ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಾ ಬಂದಿದ್ದೇವೆ. Tasty ಎಂಬ ಅಮೆರಿಕನ್ ಚಾನೆಲ್ ನಮಗೆ ಸ್ಫೂರ್ತಿ. ಮೊದಮೊದಲು ಉಡುಪಿ ಹಾಗೂ ಮಂಗಳೂರು ಭಾಗದ ಖಾದ್ಯಗಳನ್ನು ಮಾಡುವುದು ಹೇಗೆ ಎಂಬ ವಿಡಿಯೊಗಳನ್ನು ಹಾಕಿದೆವು. ಅರ್ಚನಾ ತಿನಿಸು, ಖಾದ್ಯಗಳನ್ನು ತಯಾರಿಸಿದರೆ ನಾನು ಅದನ್ನು ಚಿತ್ರೀಕರಿಸುವುದು ಮೊದಲಿನಿಂದಲೂ ರೂಢಿ. ಬರೀ ಅಷ್ಟಕ್ಕೇ ನಮ್ಮ ಪಯಣ ನಿಲ್ಲಲಿಲ್ಲ. ಯೂಟ್ಯೂಬ್ ವಿಡಿಯೊಗಳನ್ನು ಚೆಂದಗಾಣಿಸಲು ಅವನ್ನು ಹದವರಿತಂತೆ ಎಡಿಟ್ ಮಾಡಬೇಕಾಗುತ್ತದೆ. ಮಾತು ಇದ್ದರೆ ಹಿತಮಿತವಾಗಿರಬೇಕು. ಅತಿ ಮೌನವೂ ಸಹಿಸಿಕೊಳ್ಳುವುದು ಕಷ್ಟ. ಹಿನ್ನೆಲೆಯಲ್ಲಿ ಸಂಗೀತ ಬಳಸಿದರೆ ಕಾಪಿರೈಟ್ ಸಮಸ್ಯೆ ಇರದಂತೆ ನಿಗಾ ವಹಿಸಬೇಕಾದ ಜರೂರು. ಹಲವು ತಾಂತ್ರಿಕ ವಿಷಯಗಳು ಇದರಲ್ಲಿ ಅಡಕವಾಗಿವೆ. ಅವನ್ನೆಲ್ಲ ಶೋಧಿಸುತ್ತಾ, ಕಲಿಯುತ್ತಾ ಖಾದ್ಯಗಳನ್ನು ಮಾಡುವ ಬಗೆಯನ್ನು ತೋರಿಸುತ್ತಾ ಬಂದೆವು. ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗಲಾರಂಭಿಸಿತು.’

‘ನಮ್ಮ ನೆಂಟರಿಷ್ಟರಲ್ಲೇ ಕೆಲವು ಗೃಹಿಣಿಯರು – ಕೆಲಸ ಮಾಡುವ ಮನಸ್ಸಿದೆ, ಆದರೆ ಮಾಡುವಂಥ





‘ಹದಿನೇಳು ವರ್ಷ
ಆಹಾರ ಪ್ರೀತಿಯಲ್ಲೇ ಕಳೆದಿದ್ದೇನೆ.
ಇದು ಹೊಸ ಅನುಭವ. ಒಂದು ವರ್ಷದಲ್ಲಿ 215
ವಿಡಿಯೊಗಳನ್ನು ಚಾನೆಲ್‌ಗೆ ಹಾಕಿರುವೆನಷ್ಟೆ. ಇಲ್ಲಿ ಯುವಕ–
ಯುವತಿಯರಿಗೆ ಸಂಕೀರ್ಣ ಎಂದು ತಪ್ಪಾಗಿ ಭಾವಿಸಿರುವ ಖಾದ್ಯಗಳ
ತಯಾರಿಯನ್ನು ಹೇಳಿಕೊಡುತ್ತಿರುವೆ. ಒಳ್ಳೆಯದನ್ನು ಮುಕ್ತವಾಗಿ
ಹಂಚಬಲ್ಲ ವೇದಿಕೆ ಇದು. ಆದಕ್ಕೇ ಇದರ ಸಾಧ್ಯತೆಗಳನ್ನು
ಶೋಧಿಸತೊಡಗಿದೆ.’

**ಜೇಸನ್ ಡಿಸೋಜಾ**